ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 59 ]
Total No. of Questions : 59 ]

**C**

**CCE PR**
**NSR & NSPR**

Question Paper Serial No. **100**

ಇಲ್ಲಿಂದ ಕತ್ತರಿಸಿ

**ಸಂಕೇತ ಸಂಖ್ಯೆ : 01-K**

**Code No. : 01-K**

# ವಿಷಯ : ಪ್ರಥಮ ಭಾಷೆ — ಕನ್ನಡ

# Subject : First Language — KANNADA

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Repeater / NSR & NSPR)**

ದಿನಾಂಕ : 28. 06. 2022 ] [ Date : 28. 06. 2022

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 125 ] [ Max. Marks : 125

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

## *ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :*

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 59 ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

Tear here

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 10 × 1 = 10**

1. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ

   (ಎ) ಆವರಣ

   (ಬಿ) ವಿವರಣ

   (ಸಿ) ಉದ್ಧರಣ

   (ಡಿ) ವಾಕ್ಯವೇಷ್ಟನ

2. 'ಬೆಟ್ಟದಾವರೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

   (ಎ) ಕರ್ಮಧಾರಯ

   (ಬಿ) ದ್ವಿಗು

   (ಸಿ) ತತ್ಪುರುಷ

   (ಡಿ) ಗಮಕ

3. ತೃತೀಯಾ ವಿಭಕ್ತಿಯ ಕಾರಕಾರ್ಥ

(ಎ) ಸಂಪ್ರದಾನ

(ಬಿ) ಅಪಾದಾನ

(ಸಿ) ಕರ್ಮಾರ್ಥ

(ಡಿ) ಕರಣಾರ್ಥ

4. 'ಬೇಗನೆ' ಪದವು ಈ ಅವ್ಯಯಕ್ಕೆ ಸೇರಿದೆ

(ಎ) ಸಾಮಾನ್ಯಾರ್ಥಕ

(ಬಿ) ಅನುಕರಣ

(ಸಿ) ಭಾವಸೂಚಕ

(ಡಿ) ಕ್ರಿಯಾರ್ಥಕ

5. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ

(ಎ) ೦೬

(ಬಿ) ೦೯

(ಸಿ) ೧೩

(ಡಿ) ೨೫

6. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿರುವ ವಾಕ್ಯ

   (ಎ) ಸಾಮಾನ್ಯ ವಾಕ್ಯ

   (ಬಿ) ಸಂಯೋಜಿತ ವಾಕ್ಯ

   (ಸಿ) ಪ್ರಶ್ನಾರ್ಥಕ ವಾಕ್ಯ

   (ಡಿ) ಮಿಶ್ರವಾಕ್ಯ

7. 'ಮಾಡು' ಪದದ ನಿಷೇಧಾರ್ಥಕ ರೂಪ

   (ಎ) ಮಾಡಲಿ

   (ಬಿ) ಮಾಡರು

   (ಸಿ) ಮಾಡುವನು

   (ಡಿ) ಮಾಡಿಯಾರು

8. 'ಸಕ್ಕರಿ' ಪದದ ಗ್ರಾಂಥಿಕ ರೂಪ

   (ಎ) ಸಕ್ಕರೆ

   (ಬಿ) ಶರ್ಕರ

   (ಸಿ) ಸರ್ಕಾರಿ

   (ಡಿ) ಅಕ್ಕರೆ

9. ಆರು ಸಾಲಿನ ಪದ್ಯವನ್ನು ಹೀಗೆನ್ನುವರು

(ಎ) ತ್ರಿಪದಿ

(ಬಿ) ಚೌಪದಿ

(ಸಿ) ಷಟ್ಪದಿ

(ಡಿ) ಅಷ್ಟಪದಿ

10. 'ಮಳೆಯಿಂದ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಲೋಪ

(ಬಿ) ಗುಣ

(ಸಿ) ಆದೇಶ

(ಡಿ) ಆಗಮ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : 5 × 1 = 5**

11. ಬಟ್ಟಬಯಲು : ದ್ವಿರುಕ್ತಿ :: ಹುಳಹುಪ್ಪಡಿ : ......................... .

12. ಶರಚ್ಚಂದ್ರ : ಶ್ಚುತ್ವ ಸಂಧಿ :: ದಿಗಂತ : ......................... .

13. ಮಲಗು : ಅಕರ್ಮಕ ಧಾತು :: ಕೊಡು : ......................... .

14. ವಂಧ್ಯಾ : ಬಂಜೆ :: ಕುಠಾರ : ......................... .

15. ರಾಜೀವ ಸಖ : ಸೂರ್ಯ :: ರವಿಸುತ : ......................... .

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 8 × 1 = 8**

16. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು ?

17. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು ?

18. ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾವುವು ?

19. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು ?

20. ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ ?

21. ಲವನು ಕುದುರೆಯನ್ನು ಯಾವುದರಿಂದ ಕಟ್ಟಿದನು ?

22. ವಿವೇಕಾನಂದರನ್ನು 'ಮಾನವತಾಮಿತ್ರ'ರೆಂದು ಕರೆದವರು ಯಾರು ?

23. ಭಗತ್‌ಸಿಂಗ್ ಡಬ್ಬಿಯಲ್ಲಿದ್ದ ಮಣ್ಣನ್ನು ತೋರಿಸಿ ತನ್ನ ಸಹೋದರಿಗೆ ಏನೆಂದು ಹೇಳಿದನು ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 15 × 2 = 30**

24. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು?

25. ಟೊಪ್ಪಿಗೆಯ ವಿಶೇಷತೆಯನ್ನು ಗೋಕಾಕರು ಹೇಗೆ ದಾಖಲಿಸಿದ್ದಾರೆ ?

26. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು ?

27. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಯನ್ನು ವಿವರಿಸಿ.

28. ದುಷ್ಟಬುದ್ಧಿ ತನ್ನ ತಂದೆಗೆ ಏಕಾಂತದಲ್ಲಿ ಹೇಳಿದ ಮಾತುಗಳಾವುವು ?

29. ಧರ್ಮಬುದ್ಧಿಗೆ ದುಷ್ಟಬುದ್ಧಿ ನೀಡಿದ ಸಲಹೆಗಳಾವುವು ?

30. ಕವಿ ಜಿ.ಎಸ್. ಶಿವರುದ್ರಪ್ಪನವರು ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕು ಎಂದಿದ್ದಾರೆ ?

31. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?

32. ಕುವೆಂಪು ಅವರಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿತ್ತು ?

33. ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು ?

34. ವಾಲ್ಮೀಕಿ ಋಷಿಗಳ ಆಶ್ರಮಕ್ಕೆ ಯಜ್ಞಾಶ್ವ ಬಂದ ಬಗೆಯನ್ನು ವಿವರಿಸಿ.

35. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು. ಏಕೆ ?

36. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?

37. ಭಗತ್‌ಸಿಂಗ್ ಹಾಗೂ ಆತನ ಸಹಚರರು ಹುತಾತ್ಮರಾಗಲು ಕಾರಣವೇನು ?

38. ಉಪ್ಪಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ ?

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : $4 \times 3 = 12$**

39. ಸಾರಾ ಅಬೂಬಕ್ಕರ್

40. ಎ.ಎನ್. ಮೂರ್ತಿರಾವ್

41. ದ.ರಾ. ಬೇಂದ್ರೆ

42. ರನ್ನ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :**

**1 × 3 = 3**

43. ಇನತನೂಜನ ಕೂಡೆ ಮೈದುನ
ತನದ ಸರಸವನೆಸಗಿ ರಥದೊಳು
ದನುಜರಿಪು ಬರಸೆಳೆದು ಕುಳ್ಳಿರಿಸಿದನು ಪೀಠದಲಿ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ: 1 × 3 = 3**

44. "ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ"

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಎರಡನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ :**

**2 × 3 = 6**

45. ಕೈ ಕೆಸರಾದರೆ ಬಾಯಿ ಮೊಸರು.

**ಅಥವಾ**

ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

46. ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ.

**ಅಥವಾ**

ಹಣಕ್ಕಿಂತ ಗುಣ ಮೇಲು.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 × 3 = 18**

47. "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ."

48. "ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ."

49. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ."

50. "ಹೊಡೆದರೊ ಗುಂಡ ಕರುಣ ಇಲ್ಲದ್ದಂಗ."

51. "ಬೇರೆ ಬಣ್ಣವನೆ ಕಾಣೆ."

52. "ಜಾನಕಿಯ ಮಗನಿದಕೆ ಬೆದರುವನೆ."

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** **1 × 4 = 4**

53. ಕಲುಷಿತವಾದೀ ....................................................

....................................................................

....................................................................

.................................................... ಮುಟ್ಟೋಣ.

**ಅಥವಾ**

ಮತಗಳೆಲ್ಲವೂ ....................................................

....................................................................

....................................................................

........................................................ ಬಿತ್ತೋಣ.

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** **1 × 4 = 4**

54. ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ–ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ–ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ ?

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **2 × 4 = 8**

55. ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ? ತಿಳಿಸಿ.

56. ಶ್ರೀಕೃಷ್ಣನು ಕರ್ಣನಿಗೆ ಒಡ್ಡಿದ ಆಮಿಷಗಳೇನು ? ವಿವರಿಸಿ.

***ಅಥವಾ***

ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**$1 \times 4 = 4 ( 2 + 2 )$**

ವಿಜಯನಗರ ಸಾಮ್ರಾಜ್ಯದ ಪತನದ ನಂತರ ಕರ್ನಾಟಕದ ಮಲೆನಾಡಿನ ರಾಜ್ಯವಾದ ಕೆಳದಿ ಖ್ಯಾತಿ ಪಡೆಯಿತು. ಚೆನ್ನಮ್ಮಾಜಿಯು ಕೊಟ್ಟಿಪುರದ ಸಿದ್ದಪ್ಪಶೆಟ್ಟರ ಕುವರಿ. ಕೆಳದಿಯ ಸೋಮಶೇಖರನು ಈಕೆಯನ್ನು ವಿವಾಹವಾದನು. ಕ್ಷುಲ್ಲಕರ ಸೆಳವಿಗೆ ಸಿಲುಕಿ ವ್ಯಸನಾಸಕ್ತನಾದ ಸೋಮಶೇಖರನನ್ನು ಬಿಜಾಪುರದ ದಂಡಿನ ನಾಯಕ ಜನ್ನೋಪಂತನು ಕೊಂದನು. ಇದರಿಂದಾಗಿ ಕೆಳದಿಯ ಸಂಸ್ಥಾನ ಗಂಡಾಂತರಕ್ಕೆ ಗುರಿಯಾಯಿತು. ಅಸಾಧಾರಣ ಧೈರ್ಯಶಾಲಿಯಾದ ಚೆನ್ನಮ್ಮಾಜಿ ಜಾಣತನದಿಂದ ವರ್ತಿಸಿದಳು. ಧಾರುಣವಾದ ಪತಿಯ ಮರಣದ ದುಃಖವನ್ನು ನುಂಗಿಕೊಂಡು ರಾಷ್ಟ್ರದ ಹಿತಚಿಂತನೆಗೆ ಮುಂದಾದಳು. ಚಾಣಾಕ್ಷೆಯಾದ ಈಕೆ ಅಲ್ಪಾವಧಿಯಲ್ಲಿಯೇ ರಾಜನೀತಿಯ ರಹಸ್ಯವನ್ನು ಅರಿತು ಕಠೋರ ಯೋಜನೆಗಳನ್ನು ಕೈಗೊಂಡಳು. ಅನ್ಯಾಯವಾಗಿ ತನ್ನ ಪತಿಯನ್ನು ಕೊಂದ ಜನ್ನೋಪಂತನನ್ನು ಕೊಂದು ಸೇಡು ತೀರಿಸಿಕೊಂಡಳು.

ಶತ್ರುಗಳು ಚೆನ್ನಮ್ಮಾಜಿಯ ಕೈಯಲ್ಲಿ ಆಡಳಿತ ಇರದಂತೆ ಮಾಡಲು ತಂತ್ರ ಹೂಡಿದರು. ಅರಮನೆಯ ಸಂಬಂಧಿಕನನ್ನು ಪ್ರತಿಸ್ಪರ್ಧಿಯಾಗಿಸಿದರು. ಆದರೆ ಈ ಕುಚೋದ್ಯಗಳನ್ನೆಲ್ಲ ಮೆಟ್ಟಿ ನಿಂತಳು. ೧೬೭೭ ರಲ್ಲಿ ನಾಡಿನ ಜನರೆಲ್ಲ ಸೇರಿ ಚೆನ್ನಮ್ಮಾಜಿಗೆ ಪಟ್ಟಾಭಿಷೇಕ ಮಾಡಿದರು. ತರುವಾಯ ಬಸಪ್ಪ ನಾಯಕನನ್ನು ದತ್ತುಪುತ್ರನಾಗಿ ಸ್ವೀಕರಿಸಿ ರಾಜ್ಯಭಾರ ಮಾಡಿದಳು. ಕೇವಲ ಸಂಗ್ರಾಮ ಕಾರ್ಯವಲ್ಲದೆ ಅನೇಕ ಪ್ರಜಾಹಿತ ಕಾರ್ಯಗಳನ್ನು, ಧರ್ಮಕಾರ್ಯಗಳನ್ನು ಮಾಡಿದಳು. ತನ್ನ ಪತಿಯ ನೆನಪಿಗಾಗಿ ಅಗ್ರಹಾರಗಳನ್ನು ಸ್ಥಾಪಿಸಿದಳು. ದೇವರ ಗುಡಿಗಳನ್ನು ಭದ್ರಗೊಳಿಸಿದಳು, ಉತ್ಸವಗಳನ್ನು ಸಾಂಗಗೊಳಿಸಿದಳು, ಮಠಗಳನ್ನು ಕಟ್ಟಿಸಿದಳು, ಜಾತಿ ಮತ ಭೇದ ಎಣಿಸದೆ ನಾನಾ ವಿಧದ ಶಾಶ್ವತ ದಾನಗಳನ್ನು ನೀಡಿ ಚೆನ್ನಮ್ಮಾಜಿ ಕೀರ್ತಿಶೇಷಳಾದಳು.

57. *ಪ್ರಶ್ನೆಗಳು :*

ಅ) ಚೆನ್ನಮ್ಮಾಜಿ ತನ್ನ ಪತಿಯ ಸಾವಿನ ಸೇಡನ್ನು ಹೇಗೆ ತೀರಿಸಿ ಕೊಂಡಳು ?

ಬ) ಚೆನ್ನಮ್ಮಾಜಿಯು ಕೀರ್ತಿಶೇಷಳಾಗಲು ಕಾರಣವಾದ ಅಂಶಗಳಾವುವು ?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :**

**1 × 5 = 5**

58. ನಿಮ್ಮನ್ನು ಮೂಡಿಗೆರೆಯ ಸರ್ಕಾರಿ ಪ್ರೌಢಶಾಲೆಯ 'ಇಂದಿರೇಶ' ಎಂದು ಭಾವಿಸಿಕೊಂಡು, ನಿಮ್ಮ ಗ್ರಾಮಕ್ಕೆ ಬೀದಿ ದೀಪ ಹಾಕಿಸಿ ಕೊಡುವಂತೆ ಕೋರಿ, ಗ್ರಾಮಪಂಚಾಯ್ತಿ ಅಧ್ಯಕ್ಷರಿಗೆ ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಮಂಗಳೂರಿನ ಸರ್ಕಾರಿ ಪ್ರೌಢಶಾಲೆಯ 'ಶ್ರೀಲಕ್ಷ್ಮಿ' ಎಂದು ಭಾವಿಸಿಕೊಂಡು, 'ಫಿಟ್ ಇಂಡಿಯಾ ಸಪ್ತಾಹ'ದ ಸಮಾರೋಪ ಸಮಾರಂಭಕ್ಕೆ ಆಹ್ವಾನಿಸಿ, ಮೈಸೂರಿನ ಕೃಷ್ಣರಾಜ ನಗರದಲ್ಲಿ ವಾಸವಿರುವ 'ಉಷಾ' ಎಂಬ ಹೆಸರಿನ ತಾಯಿಯವರಿಗೆ ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :**

**1 × 5 = 5**

59. ಸ್ವಚ್ಛ ಭಾರತ ಅಭಿಯಾನ.

**ಅಥವಾ**

ಮತದಾರರ ಸಾಕ್ಷರತಾ ಸಂಘ.